ಆ)ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಗೃಹನಿರ್ಮಾಣ ಸಹಕಾರ ಸಂಘಗಳ ಒಟ್ಟು ಸಂಖ್ಯೆ ಎಷ್ಟು?

ಆ)ಆ ಪೈಕಿ ಎಷ್ಟಕ್ಕೆ ಸ್ಟಾಂಪ್ ಮನ್ನಾ ಮಾಡಲಾಗಿದೆ. ಉಳಿದ ಗೃಹ ನಿರ್ಮಾಣ ಸಹಕಾರ ಸಂಘಗಳಾವುವು?

ಶ್ರೀ ಎಂ. ಮಲ್ಲಿಕಾರ್ಜುನಖಿರ್ಗೆ (ಸಹಕಾರ ಸಚಿವರು)

25

ಯಾವುದೇ ಗೃಹನಿರ್ಮಾಣ ಸಹಕಾರ ಸಂಘ ಮುದ್ರಾಂಕ ಶುಲ್ಕ ಅಥವಾ ನೋಂದಣಿ ಫೀಯಿಂದ ವಿನಾಯಿತಿ ಹೊಂದಿರುವುದಿಲ್ಲ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 2.9.93ರಂದು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ 7ನೇ ಪಟ್ಟಿಯಲ್ಲಿರುವ 52 ಪ್ರಶ್ನೆಗಳ ಪೈಕಿ ಸಂಖ್ಯೆ : 409,403,465,199,416 ಹಾಗೂ 463 ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ 46 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ವಿಷಯ : -ಹೊಸದಾಗಿ ಶಾಸನ ಸಭೆಗಳಲ್ಲಿ ಅಂಗೀಕೃತವಾದ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ

ಪಂಚಾಯಿತಿಗಳ ಕ್ಷೇತ್ರ ಪುನರ್‌ವಿಂಗಡಣೆ ಕುರಿತು

ಶ್ರೀ ಡಿ.ಬಿ. ಚಂದ್ರೇಗೌಡ(ತೀರ್ಥಹಳ್ಳಿ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 121(411)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ)ಹೊಸದಾಗಿ ಶಾಸನಸಭೆಗಳಲ್ಲಿ ಅಂಗೀಕೃತವಾದ ಮಸೂದೆಗೆ ಸಂಬಂಧಪಟ್ಟವರಿಂದ ಒಪ್ಪಿಗೆ ದೊರೆತಿದೆಯೇ; ಹಾಗೆ ದೊರೆತಿದ್ದಲ್ಲಿ ಅದರ ಅನುಗುಣವಾಗಿ ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾಪಂಚಾಯಿತಿಗಳ ಕ್ಷೇತ್ರ ಪುನರ್‌ವಿಂಗಡಣೆ ಮಾಡುವ ಕೆಲಸವು ಯಾವ ಹಂತದಲ್ಲಿದೆ;

ಆ)ಈ ಪುನರ್ ವಿಂಗಡಣೆಯ ಹಂತದಲ್ಲಿ ಆಗುವ ಒಟ್ಟು ಗ್ರಾಮಪಂಚಾಯಿತಿಗಳ, ತಾಲ್ಲೂಕು ಪಂಚಾಯತಿಗಳ ಜಿಲ್ಲಾಪಂಚಾಯತಿಗಳ ಒಟ್ಟು ಸಂಖ್ಯೆ ಎಷ್ಟು;(ವಿವರ ನೀಡುವುದು)

ಇ)ಸದರಿ ಕ್ಷೇತ್ರದ ಪುನರ್‌ವಿಂಗಡಣೆಯ ಕಾರ್ಯ ಮುಗಿದಿದ್ದಲ್ಲಿ, ಇವುಗಳು ಚುನಾವಣೆ ಮಾಡುವ ಘೋಷಿತ ನಿರ್ಧಾರಕ್ಕೆ ಸರ್ಕಾರವು ಬದ್ಧವಾಗಿದೆಯೇ, ಹಾಗಿಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಎಂ.ವೈ. ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಆ)ಹೌದು

ಕ್ಷೇತ್ರವಿಂಗಡಣ ಕಾರ್ಯವು ಪ್ರಗತಿಯಲ್ಲಿದೆ.

ಆ) ಗ್ರಾಮ ಪಂಚಾಯಿತಿಗಳ ಒಟ್ಟು ಸಂಖ್ಯೆ ಅಂದಾಜು : 5590, ತಾಲ್ಲೂಕು